## ಪ್ರಾಚೀನ ಹಿಂದೂ ದೇಗುಲ ಅವಂತಿಸ್ವಾಮಿ



ಅವಂತಿಸ್ವಾಮಿ ದೇವಾಲಯವು ಕಾಶ್ಮೀರದ ಪ್ರಾಚೀನ ಶಿಥಿಲ ಹಿಂದೂ ದೇವಾಲಯವಾಗಿದೆ. ಕಾಶ್ಮೀರದಿಂದ 28 ಕಿ.ಮೀ. ದೂರದಲ್ಲಿರುವ ಝೀಲಂ ನದಿಯ ದಡದಲ್ಲಿನ ಅವಂತಿಪುರದಲ್ಲಿರುವ ಅವಂತಿಸ್ವಾಮಿ ದೇವಾಲಯ 9ನೇ ಶತಮಾನದ ಉತ್ಪಾಲ ರಾಜವಂಶದ ರಾಜ ಅವಂತಿವರ್ಮನ್ ಆಳ್ವಿಕೆಯಲ್ಲಿ ನಿರ್ಮಿಸಲಾಯಿತು. ಈ ದೇವಾಲಯವು ಶಿವ ಮತ್ತು ವಿಷ್ಣುವಿಗೆ ಅರ್ಪಿಸಲಾಗಿದೆ. ಈ ದೇವಾಲಯದ ವಾಸ್ತುಶಿಲ್ಪ ಉತ್ತರ ಭಾರತದ ಶಾಸ್ತ್ರೀಯ ನಾಗರ ಶೈಲಿಯ ವಾಸ್ತುಶಿಲ್ಪಕ್ಕೆ ಗಮನಾರ್ಹ ಹೋಲಿಕೆಯನ್ನು ಹೊಂದಿದೆ. ಮರಳುಗಲ್ಲಿನಿಂದ ನಿರ್ಮಿಸಲಾಗಿರುವ ಇದು ವಿಶಿಷ್ಟ ವಾಸ್ತು ಶಿಲ್ಪ ಹೊಂದಿದ್ದು, ಸಂಕೀರ್ಣವಾದ ಕೆತ್ತನೆಗಳಿಂದ ಮನಸೆಳೆಯುತ್ತದೆ. ಅವಂತಿವರ್ಮನ ಕಾಲದಲ್ಲಿ ಈ ಪ್ರದೇಶವು ಸಮೃದ್ಧವಾಗಿದ್ದು, ಕಾಶ್ಮೀರವು ಶೈವ ಧರ್ಮ ಮತ್ತು ಹಿಂದೂ ತತ್ವಶಾಸ್ತ್ರದ ಮತ್ತು ಸಂಸ್ಕೃತ ಸಾಹಿತ್ಯದ ಕಲಿಕಾ ಕೇಂದ್ರವಾಗಿತ್ತು. ಇಲ್ಲಿ ಕಂಡುಬಂದ ಸುಂದರವಾದ ಗಿಳಿಗಳ ಸಾಲಿನ ಕೆತ್ತನೆ ಮನಸೆಳೆಯಿತು.

–ಎಸ್. ಪ್ರಭಾವತಿ, ಬೆಂಗಳೂರು



## ಕೀಟ ಕಟ್ಟಿದ ‘ಸೌದೆಹೊರೆ’

ಮಲೆನಾಡಿನ ಗೆಳತಿ ಮನೆಗೆ ಹೋಗಿದ್ದಾಗ ಅಂಗಳದಲ್ಲಿ ಅರಳಿದ ಗುಲಾಬಿ ಬಣ್ಣದ ಬಾಟಲ್ ಬ್ರಷ್ ಹೂವುಗಳು ಆಕರ್ಷಿಸಿದವು. ಹತ್ತಿರ ಹೋಗಿ ನೋಡಿದಾಗ ಗಿಡದಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಕಟ್ಟಿಗೆಯಿಂದ ರೂಪುಗೊಂಡ ಗೂಡಿನಂತಹ ರಚನೆ ಕಂಡುಬಂದಿತು. ಅದು ಪುಟ್ಟ ಕಟ್ಟಿಗೆಯ ಹೊರೆಯಂತೆ ಕಾಣುತ್ತಿತ್ತು. ಬಾಲ್ಯದಲ್ಲಿ ಒಣ ತರಗಲೆ ಜೊತೆ ಇಂಥವು ತೆವಳುತ್ತಾ ಸಾಗುವುದನ್ನು ಕಂಡಿದ್ದೆ. ತರಲೆ ಮಕ್ಕಳು ಕಟ್ಟಿಗೆಯನ್ನು ಬಿಡಿಸಿ ಅದರೊಳಗೆ ಯಾವ ಹುಳು ಇದೆ ಎಂದು ಪರೀಕ್ಷಿಸಿ ನೋಡುತ್ತಿದ್ದರು.

ಬಾಟಲ್ ಬ್ರಷ್ ಗಿಡದಲ್ಲಿ ಅಲ್ಲಲ್ಲಿ ಅದರ ಎಲೆಗಳನ್ನು ಹುಳಗಳು ತಿಂದದ್ದು ಕಂಡುಬಂತು. ಹಳ್ಳಿಗಳಲ್ಲಿ ಇದನ್ನು ಕೋಲು ಹುಳ ಎನ್ನುತ್ತಾರೆ. ಇವು ಒಣಗಿದ ಕಡ್ಡಿಗಳಿಂದ ತನ್ನ ಮೈಯ ಸುತ್ತ ಗೂಡು ಸುತ್ತುವುದೊಂದು ಸೋಜಿಗ. ಗೂಡೊಳಗಿಂದ ತಲೆಯನ್ನು ಮಾತ್ರ ಹೊರಹಾಕಿ ಗಿಡಗಳ ಎಲೆಗಳನ್ನು ತಿನ್ನುತ್ತವೆ. ಇವು ಸುಮಾರು ಒಂದರಿಂದ ಎರಡಿಂಚು ಉದ್ದ ಇರುತ್ತವೆ. ಪ್ರತಿಯೊಂದು ಗೂಡಿನಲ್ಲಿ ಒಂದು ಕಟ್ಟಿಗೆ ಮಾತ್ರ ಉದ್ದ ಇರುತ್ತಿದ್ದುದು ವಿಶೇಷ ಅನಿಸಿತು. ವೈರಿಗಳಿಂದ ರಕ್ಷಣೆಗೆ ಇಂತಹ ಪ್ರಾಕೃತಿಕ ಗೂಡು ಕಟ್ಟಿ, ಆ ಗಿಡದ ಎಲೆಗಳನ್ನೇ ಭಕ್ಷಿಸಿ ಬದುಕುವ ಈ ಹುಳ ಅಸಾಮಾನ್ಯವೇ ಸರಿ.

–ಶಾಲಿನಿ ನಾಯಕ್, ಬೆಂಗಳೂರು

## ದೂಳು ಸೃಷ್ಟಿಸಿದ ಅಮೂರ್ತ ಕಲೆ

ಕಾಶ್ಮೀರದಲ್ಲೋ ಅಥವಾ ಹಿಮಾಲಯದಲ್ಲೋ ಮರಗಿಡಗಳ ಎಲೆಗಳನ್ನು ಹಿಮ ಆವರಿಸಿಕೊಂಡು ಅಲ್ಲೊಂದು ಬೆಳ್ಳಿಯ ಹೊಸಲೋಕವೇ ರೂಪುಗೊಳ್ಳುತ್ತದೆ. ಹಾಗೆಯೇ ಅಡಿಕೆ ಚಾಲಿ ಸುಲಿಯುವ ಯಂತ್ರ ನಿಲ್ಲಿಸಿದ ಸುತ್ತಲಿನ ಜಾಗದಲ್ಲಿನ ಮರಗಿಡಗಳ ಎಲೆಗಳನ್ನು ದೂಳು ಆವರಿಸಿಕೊಂಡು ಅಲ್ಲೊಂದು ಅಮೂರ್ತ ಕಲೆಯು ರೂಪುಗೊಂಡಿತ್ತು. ದಿನವೂ ಯಂತ್ರದಿಂದ ಹೊರಬಿದ್ದ ದೂಳು ಅಂಟಿಸಿಕೊಂಡು ಒಂದು ವಿಚಿತ್ರ ಆಕಾರ ಪಡೆದುಕೊಂಡಿರುವುದನ್ನು ಇಲ್ಲಿನ ಚಿತ್ರದಲ್ಲಿ ಕಾಣಬಹುದು. ಇದ್ಯಾವ ಮರ ಎಂಬುದು ಕೂಡ ಗುರುತಿಸಲು ಅಸಾಧ್ಯ ಎನಿಸುವಂತೆ ಇಲ್ಲಿನ ಮರಗಿಡಗಳ ರೂಪವೇ ಬದಲಾಗಿದೆ.

ಒಣಗಿದ ಚಾಲಿ ಅಡಿಕೆಯನ್ನು ಯಂತ್ರಗಳ ಸಹಾಯದಿಂದ ಸುಲಿಯುವುದು ಈಗ ಸಾಮಾನ್ಯ. ಈ ಮೊದಲು ಮೆಟ್ಟುಗತ್ತಿ ಬಳಸಿ ಕೈಯಿಂದಲೇ ಚಾಲಿ ಅಡಿಕೆ ಸುಲಿಯುತ್ತಿದ್ದರು. ಈಗ ಜನರ ಕೊರತೆಯಿಂದಾಗಿ ಬಹುತೇಕ ಅಡಿಕೆ ಬೆಳೆಗಾರರು ಯಂತ್ರಗಳನ್ನೇ ಆಶ್ರಯಿಸಿದ್ದಾರೆ. ಈ ಯಂತ್ರವು ಸಾಧ್ಯವಾದಷ್ಟೂ ಊರ ಹೊರಗೇ ಇದ್ದರೆ ಅನುಕೂಲ. ಇಲ್ಲವಾದರೆ, ಅದರಿಂದ ಹೊರಬೀಳುವ ದೂಳು ಸುತ್ತಲಿನ ಪರಿಸರವನ್ನು ದೂಳುಮಯವಾಗಿಸುತ್ತದೆ. ಊರಿನ ಹೊರಗಡೆ ಯಂತ್ರ ನಿಲ್ಲಿಸಿದಾಗ್ಯೂ ಅಲ್ಲಿಂದ ಹೊರಬೀಳುವ ದೂಳು ಸುತ್ತಲಿನ ಮರಗಿಡಗಳಿಗೆ ಈ ರೂಪ ನೀಡಿದೆ. ಅಲ್ಲೊಂದು ಅಮೂರ್ತ ಕಲೆಯನ್ನೇ ಸೃಷ್ಟಿಸಿದೆ.

–ಜಿ.ಎಂ. ಬೊಮ್ನಳ್ಳಿ, ಶಿರಸಿ

